ಅಸಲು ದಾವಾ ಸಂಖ್ಯೆ 106/2016

ಡಿ.ಡಬ್ಲ್ಯು:1

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ದಿನಾಂಕ 10.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ. ಹೆಚ್.ಎನ್.ಎಸ್. ವಾದಿ ಪರ ವಕೀಲರಿಂದ**

ನಾನು ಪ್ರಶ್ನಿತ ಮರಣ ಶಾಸನದ ಮೇಲೆ ಈ ದಾವೆಯಲ್ಲಿ ಸೇರ್ಪಡೆಗೊಂಡಿರುತ್ತೇನೆ. ಈ ದಾವೆಯಲ್ಲಿ ನನ್ನ ತಂಂದೆ ಮರಣದ ನಂತರ ನನ್ನ ಅಣ್ಣ ಶ್ರೀನಿವಾಸಮೂರ್ತಿಯವರನ್ನು ಮಾತ್ರ ಪಕ್ಷಗಾರರಾಗಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೆ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ತಂದೆ ಮೃತರಾದ ನಂತರ ನನ್ನ ಅಣ್ಣನಾದ ಶ್ರೀನಿವಾಸಮೂರ್ತಿಯವರಿಗೆ ಮಾತ್ರ ಹಕ್ಕಿದೆ ಎಂದರೆ ಸರಿಯಲ್ಲ.

ನನ್ನ ಅಣ್ಣ ಶ್ರೀನಿವಾಸಮೂರ್ತಿಯವರು ವಾದಪತ್ರ ಅಂಶಗಳನ್ನು ಒಪ್ಪಿಕೊಂಡು, ದಾವೆಯನ್ನು ತೀರ್ಪುಗೊಳಿಸಲು ಪ್ರಾರ್ಥಿಸಿದ್ದಾರೆ ಎಂದರೆ ನನ್ನ ಅಣ್ಣ ನ್ಯಾಯಾಲಯಕ್ಕೆ ಯಾವಾಗಲು ಹಾಜರಾಗಿರುವುದಿಲ್ಲ. ದಾಖಲೆಗಳನ್ನು ಸೃಷ್ಟಿಮಾಡಿದ್ದಾರೆ ಎಂದು ನುಡಿಯುತ್ತಾರೆ.

ದಾನಪತ್ರವನ್ನು ರದ್ದುಪಡಿಸುವ ಸಂಬಂಧ ದಿಃ 30.08.2013 ರಂದು ನನ್ನ ನೈಸರ್ಗಿಕ ತಾಯಿ ಕಮಲಮ್ಮರವರಿಗೆ ವಾದಿಯು ನೋಟಿಸು ನೀಡಿದ್ದರು ಎಂಂದರೆ ಗೊತ್ತಿಲ್ಲ. ಅಲ್ಲದೇ ಕರಾರು ಮಾಡಿಕೊಟ್ಟಿರುವ 'ಬಿ' ಅನುಸೂಚಿ ಸ್ವತ್ತನ್ನು ಹಿಂಪಡೆದುಕೊಳ್ಳುವಂತೆ ನೋಟಿಸಿನಲ್ಲಿ ತಿಳಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ನೋಟಿಸಿಗೆ ನನ್ನ ತಂದೆ ಮತ್ತು ನನ್ನ ತಾಯಿ ಪ್ರತ್ಯುತ್ತರ ನೀಡಿಲ್ಲ ಎಂದರೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತರಾದ ನಂತರ ಈ ದಾವೆ

ಸಲ್ಲಿಸಿರುವ ವಿಚಾರ ತಿಳಿಯಿತು ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತರಾದ ನಂತರ ವಾದಿಯು ನನ್ನ ತಂದೆಯ ಈ ದಾವೆ ಸಲ್ಲಿಸಿದ್ದು, ನನ್ನ ತಾಯಿ ಜೀವಿತಾವಧಿಯಲ್ಲಿ ನನ್ನ ತಾಯಿಯ ವಿರುದ್ಧ ದಾವೆ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ವಾದಿಯು ನನ್ನ ತಾಯಿಗೆ ನೋಟಿಸು ನೀಡಿದ್ದಾಗ ನಾನು ನನ್ನ ತಾಯಿಯ ಜೊತೆಗೆ ವಾಸವಿದ್ದೆ. ವಾದಿಯು ನನ್ನ ತಾಯಿಗೆ ನೋಟಿಸು ನೀಡಿದಾಗ ನನ್ನ ತಂದೆ-ತಾಯಿಯ ಜೊತೆಗೆ ನಾನು ವಾಸವಿರಲಿಲ್ಲ, ನನ್ನ ಅಣ್ಣ ಶ್ರೀನಿವಾಸ ಮಾತ್ರ ವಾಸವಿದ್ದರು ಎಂದರೆ ಸರಿಯಲ್ಲ.

ದಾವಾ 'ಬಿ' ಅನುಸೂಚಿ ಸ್ವತ್ತು ಬೆಲೆ ಬಾಳುವ ಆಸ್ತಿಯಾಗಿದೆ ಎಂದರೆ ಸರಿ. ಕ್ರಯದ ಕರಾರನ್ನು ರದ್ದುಪಡಿಸಿ, ಸದರಿ ಕ್ರಯದ ಕರಾರಿನ ಅನುಸೂಚಿ ಸ್ವತ್ತನ್ನು ಹಿಂಪಡೆದುಕೊಳ್ಳಲು ತೊಂದರೆ ಇದೆಯಾ ಎಂದರೆ ಕರಾರನ್ನು ರದ್ದುಪಡಿಸಲು ಅವರು ನಮಗೆ ಕೇಳಿಲ್ಲ ಎಂದು ನುಡಿಯುತ್ತಾರೆ.

ದಾವಾ 'ಎ' ಅನುಸೂಚಿ ಸ್ವತ್ತನ್ನು ವಾದಿಗೆ ಬಿಟ್ಟುಕೊಡಲು ತೊಂದರೆ ಇದಿಯಾ ಎಂದರೆ ಸದರಿ ಸ್ವತ್ತು ನನ್ನ ತಾಯಿಯ ನಿರುಪಾದಿಕ ಸ್ವತ್ತಾಗಿದ್ದು, ನನ್ನ ತಾಯಿ ಮರಣಾ ನಂತರ ಸದರಿ ಸ್ವತ್ತು ನನ್ನ ತಂದೆಗೆ ಖಾತೆಯಾಗಿದ್ದು, ಸದರಿ ಸ್ವತ್ತಿನಲ್ಲಿ ನಮಗೆ ಹಕ್ಕು ಇರುವುದರಿಂದ ಬಿಟ್ಟುಕೊಡಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತರಾದ ನಂತರ, ದಾವಾ ಅನುಸೂಚಿ ಎ ಸ್ವತ್ತು ನನ್ನ ತಂದೆಗೆ ಬಂದಿದ್ದು, ಆ ನಂತರ ಸದರಿ ಸ್ವತ್ತಿನಲ್ಲಿ ನನ್ನ ಅಣ್ಣನಿಗೆ ಮಾತ್ರ ಏಕಸ್ವಾಮ್ಯ ಅಧಿಕಾರಿ ಇದೆ ಎಂದರೆ ಸರಿಯಲ್ಲ.

ನನ್ನನ್ನು ನನ್ನ ತಂದೆ-ತಾಯಿ ನನ್ನ ದೊಡ್ಡಪ್ಪ ರಂಗಯ್ಯರವರಿಗೆ ದತ್ತು ನೀಡಿದ್ದಾರೆ ಎಂದರೆ ಸರಿ. ಆದುದರಿಂದಾಗಿ ನನ್ನ ತಾಯಿಗೆ ದಾನದ ಮೂಲಕ ಬಂದಂತಹ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ದೊಡ್ಡಪ್ಪ ರಂಗಯ್ಯರವರಿಗೆ ದತ್ತು ಮಗನಾಗಿದ್ದು, ನನಗೆ ಸದರಿ ರಂಗಯ್ಯರವರ ಆಸ್ತಿಯಲ್ಲಿ ಮಾತ್ರ ಹಕ್ಕು, ಅಧಿಕಾರವಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಮರಣ ಶಾಸನ ಬರೆದಿದ್ದಾರೆ ಎಂದು ತಿಳಿಸಿದ್ದು, ಆ ಪತ್ರ ಬರೆಯುವ ಕಾಲಕ್ಕೆ ನನ್ನ ತಂದೆಗೆ ಕಣ್ಣು ಕಾಣುತ್ತಿರಲಿಲ್ಲ, ಪ್ರಜ್ಞೆ ಇರಲಿಲ್ಲ, ಹಾಸಿಗೆಯಿಂದ ಎದ್ದೇಳಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಪಾರ್ಕಿನ್‌ಸನ್ ಕಾಯಿಲೆ ಇರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. 2014 ರಿಂದ ನನ್ನ ತಂದೆಗೆ ಪಾರ್ಕಿನ್‌ಸನ್ ಕಾಯಿಲೆ ಇತ್ತು ಎಂದು ನುಡಿಯುತ್ತಾರೆ. 2018 ರಲ್ಲಿ ನನ್ನ ತಂದೆ ಮರಣ ಶಾಸನವನ್ನು ಬರೆದಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಪಾರ್ಕಿನ್‌ಸನ್ ಕಾಯಿಲೆ ಇದ್ದ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ವೈದ್ಯರಾದ ವೆಂಕಟೇಶ್ ರವರ ಅಭಿಪ್ರಾಯದಂತೆ ನನ್ನ ತಂದೆಯು ಮಾನಸಿಕವಾಗಿ ಸದೃಡರಾಗಿದ್ದಾರೆ ಎಂದು ವೈದ್ಯರ ತಿಳಿಸಿದ್ದಾರೆ ಎಂದರೆ ಸರಿ. ನನ್ನ ತಂದೆ ಮರಣ ಶಾಸನವನ್ನು ಬರೆದು, ಅದನ್ನು ವಕೀಲರಾದ ಶ್ರೀ. ಪಿ.ಸುರೇಶ್ ರವರಿಗೆ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ಮರಣ ಶಾಸನ ಪತ್ರಕ್ಕೆ ಡಾ.ವೆಂಕಟೇಶ್ ರವರು ಸಹಿ ಮಾಡಿದ್ದಾರೆ ಎಂದರೆ ಸರಿ. ಸದರಿ ವೈದ್ಯರು ಆರ್ಥೋಪೆಡಿಕ್ ಸರ್ಜನ್ ಎಂದರೆ ಸರಿ. ಅವರು ಪಾರ್ಕಿನ್‌ಸನ್ ಕಾಯಿಲೆಗೆ ಚಿಕಿತ್ಸೆ ನೀಡುವುದಿಲ್ಲ

ಎಂದರೆ ಸರಿಯಲ್ಲ. ಎಂ.ಬಿ.ಬಿ.ಎಸ್ ವೈದ್ಯರು ಆ ಕಾಯಿಲೆಗೆ ಚಿಕಿತ್ಸೆ ನೀಡಬಹುದು ಎಂದು ನುಡಿಯುತ್ತಾರೆ. ಸದರಿ ಡಾ.ವೆಂಕಟೇಶ್ ಇವರು ನನ್ನ ತಂದೆಯ ಕುಟುಂಬದ ವೈದ್ಯರಾಗಿದ್ದರು.

ನನ್ನ ತಂದೆ ದಾಸಪ್ಪ ನನ್ನ ಪರವಾಗಿ ಯಾವುದೆ ಮರಣ ಶಾಸನ ಬರೆಸಿಲ್ಲ, ಅದನ್ನು ನಾನು ಮತ್ತು ನನ್ನ ವಕೀಲರು ಮತ್ತು ಸಾಕ್ಷಿದಾರರು ಸೇರಿ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ.

ನನ್ನ ಅಣ್ಣ ಡಾ. ಎಂ.ಬಿ. ಶ್ರೀನಿವಾಸಮೂರ್ತಿಯವರು ನ್ಯಾಯಾಧೀಶರ ಮಗಳಾದ ಗೀತಾಂಜಲಿ ಎಂಬುವವರನ್ನು ವಿವಾಹವಾಗಿದ್ದಾರೆ ಎಂದರೆ ಸರಿ. ದಾವಾ ಸ್ವತ್ತನು ಲಪಟಾಯಿಸುವ ಉದ್ದೇಶದಿಂದ ಅನ್ಯ ಸಮುದಾಯದ ಹುಡುಗಿಯನ್ನು ಮದುವೆಯಾಗಿದ್ದಾರೆ ಎಂದು ನನ್ನ ಅಣ್ಣನನ್ನು ಕುಟುಂಬದಿಂದ ಹೊರಗೆ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನು ಆಗ 20 ವರ್ಷ ವಯಸ್ಸುಳ್ಳವನಾಗಿದ್ದು, ಅದನ್ನು ನನ್ನ ಹಿರಿಯರು ನಿರ್ಧರಿಸಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆ ಮೃತರಾಗುವ ಮುಂಚೆ ಕೋಮಾದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಕೋಮಾದಲ್ಲಿರುವ ಫೋಟೋವನ್ನು ನನ್ನ ಅಣ್ಣ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಪ್ರಜ್ಞಾಹೀನ ರೋಗಿಯನ್ನು ಮನೆಯಲ್ಲಿ ನೋಡಿಕೊಳ್ಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸಂಬಂಧ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾನಪತ್ರ ರದ್ದಾದ ನಂತರ ದಾವಾ 'ಎ' ಸ್ವತ್ತಿನಲ್ಲಿ ವಾದಿಗೆ ಹಕ್ಕು ಬರುತ್ತದೆ ಎಂದರೆ ಸರಿಯಲ್ಲ. ವಾದಿಯ ಹಕ್ಕು ನಿರಾಕರಣೆಗೆ ನನಗೆ ಅಧಿಕಾರವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 106/2016

ಡಿ.ಡಬ್ಲ್ಯು:1

**<u>ಮರುವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

Sd/- 10.06.26

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡೂರು